ಇನ್ನು ಸಿನಿಮಾಗಳ ವಿಚಾರ ಇಪ್ಪತ್ತು ಸಾವಿರ ಜನಸಂಖ್ಯೆಗಿಂತ ಕಡಮೆ ಇರುವ ಪ್ರದೇಶಗಳಲ್ಲಿ ಪ್ರದರ್ಶಿತವಾಗುವ ಕನ್ನಡ ಚಲನಚಿತ್ರಗಳಿಗೆ ಸರ್ಕಾರ ವಿಧಿಸುವ ಮನರಂಜನೆ ತೆರಿಗೆಯಲ್ಲಿ ಅರ್ಧದಷ್ಟು ವಿನಾಯಿತಿ ನೀಡಲಾಗಿದೆ. ಇಪ್ಪತ್ತು ಸಾವಿರಕ್ಕಿಂತ ಜಾಸ್ತಿ ಇದ್ದರೆ ತೆರಿಗೆ ಜಾಸ್ತಿ ಕೊಡ ಬೇಕು. ''ಎ'' ಸರ್ಟಿಫಿಕೇಟ್ ಇಲ್ಲದ ಚಲನಚಿತ್ರಗಳನ್ನು ಯಾರೂ ನೋಡುವುದಕ್ಕೆ ಹೋಗುವು ದಿಲ್ಲ. ಯಾರಿಗಾದರೂ ''ಎ'' ಸರ್ಟಿಫಿಕೇಟ್ ಚಲನಚಿತ್ರಗಳೇ ಬೇಕು. ಇಪ್ಪತ್ತು ಸಾವಿರ ಜನ ಸಂಖ್ಯೆಗಿಂತ ಕಡಮೆ ಇರುವ ಪ್ರದೇಶಗಳಲ್ಲಿ ಪ್ರದರ್ಶಿತವಾಗುವ ಕನ್ನಡ ಚಲನಚಿತ್ರಗಳಿಗೆ ಅರ್ಧ ತೆರಿಗೆ ವಿನಾಯಿತಿ ನೀಡಲಾಗುವುದೆಂದರೆ, ಇಪ್ಪತ್ತು ಸಾವಿರದ ಮೇಲೆ ಒಬ್ಬ ಜಾಸ್ತಿಯಾದರೆ ಏನು ಮಾಡು ವುದು ? ಊರಿನವರೆಲ್ಲ ಸೇರಿಕೊಂಡು ಅವನನ್ನು ಸಾಯಿಸಬೇಕಾಗುತ್ತದೆ, ಅಷ್ಟೇ ! ಆದುದರಿಂದ ಜನಸಂಖ್ಯೆ ಆಧಾರದ ಮೇಲೆ ತೆರಿಗೆ ವಿನಾಯಿತಿ ಕೊಡುವುದನ್ನು ನಿಲ್ಲಿಸಿಬಿಡಿ ಒಂದೂವರೆ ಟಿಕೆಟ್ ಪಡೆಯುವವರಿಗೆ ಇಷ್ಟು ಎರಡೂವರೆ ಟಿಕೆಟ್ ಪಡೆಯುವವರಿಗೆ ಇಷ್ಟು ಅಥವಾ ಇದಕ್ಕೂ ಮೇಲ್ಪಟ್ಟು ಬೆಲೆಯ ಟಿಕೆಟ್ ಪಡೆಯುವವರಿಗೆ ಇಷ್ಟು ಎಂದು ಮಾಡಿ. ಬೆಂಗಳೂರಿನಲ್ಲಿ ಐದು ರೂಪಾಯಿ ಟಿಕೆಟ್‌ಗೆ ಹದಿನೈದು ರೂಪಾಯಿ ಬ್ಲಾಕ್ ಕೊಟ್ಟು ನೋಡುತ್ತಾರೆ.

ಮಾರಾಟ ತೆರಿಗೆ ಮೇಲೆ ಶೇಕಡ ಹತ್ತರಷ್ಟು ಸರ್‌ಚಾರ್ಜ್‌ನ್ನು ಹಾಕಲಾಗಿದೆ. ಮಾನ್ಯ ಫೋರ್ಡೆ ಯವರು ಹಣಕಾಸಿನ ಮಂತ್ರಿಗಳಾಗಿದ್ದಾಗ, ಎಲ್ಲದರ ಮೇಲೂ ತೆರಿಗೆ ಹಾಕಿಬಿಟ್ಟಿದ್ದೀರಿ ಉಳಿದಿರುವುದು ಇನ್ನೊಂದೇ ಒಂದು ಇದೆ. ಅದೇ ಉಚ್ಛ್ವಾಸ-ನಿಚ್ಛ್ವಾಸದ ಮೇಲೂ ತೆರಿಗೆ ಹಾಕಿ ಬಿಡಿ ಎಂದು ಹೇಳಿದ್ದೆ. ಉಚ್ಛ್ವಾಸ-ನಿಚ್ಛ್ವಾಸದ ಮೇಲೂ ತೆರಿಗೆ ಹಾಕುವುದರಿಂದ ಉಸಿರಾಟದ ಮೇಲೆ ಹಿಡಿತಪಿಟ್ಟುಕೊಳ್ಳಲು ಅನುಕೂಲವಾಗುವುದಲ್ಲದೆ ಸರ್ಕಾರಕ್ಕೆ ಆದಾಯ ಬರುತ್ತದೆ ! ಮಾರಾಟ ತೆರಿಗೆ ಮೇಲೆ ಸರ್‌ಚಾರ್ಜ್ ವಿಧಿಸುವ ಬದಲು, ಈಗಿರುವ ಮಾರಾಟ ತೆರಿಗೆಯನ್ನು ಸರಿಯಾಗಿ ವಸೂಲು ಮಾಡಿದರೆ ಹೆಚ್ಚು ಆದಾಯ ಬರುತ್ತದೆ. ಆಕ್ಟ್ರಾಯನ್ನು ರದ್ದು ಮಾಡಲಾಗಿದೆ ; ಬಹಳ ಸಂತೋಷ. ಚಲನಚಿತ್ರಗಳ ಹಂಚಿಕೆದಾರರ ಮೇಲೆ ತೆರಿಗೆ ಹಾಕಿಲ್ಲ. ಅವರು ಬೇಕಾದಷ್ಟು ದುಡ್ಡು ಸಂಪಾದನೆಮಾಡುತ್ತಿ ದ್ದಾರೆ. ಬೇಕಾದರೆ ಸಿನಿಮಾ ಅನುಭವವಿರುವ ನನ್ನಂಥವನು ಸಮಿತಿಗೆ ಹಾಕಿ ವಿಚಾರ ಮಾಡೋಣ. ದೊಡ್ಡ ದೊಡ್ಡ ಐ.ಎ.ಎಸ್. ಅಧಿಕಾರಿಗಳು ಹವಾ ನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ಕೊಂಡು ಗುಣಾಕಾರ ಹಾಕಿದರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಮಾನ್ಯ ಅಧ್ಯಕ್ಷರು ನನಗೆ ಮಾತ ನಾಡಲು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ, ನಾನು ಹೇಳಿದ್ದನೆಲ್ಲ ಮಾನ್ಯ ಯಾಹ್ಯಾ ಸಾಹೇ ಬರು ಗವಂನದಲ್ಲಿಟ್ಟುಕೊಳ್ಳುತ್ತಾರೆಂದು ಆಶಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

## Attack on the house of Sri A. K. Subbaiah Leader of the Opposition in the Legislative Council

† SRI A. LAKSHMISAGAR.—Sir, with your kind permission I wish to raise every serious matter that took place this morning, and wish to bring this matter to the notice of the House and also to the notice of the Government. Permit me to narrate briefly the facts relating to this incident. It appears that Sri A. K. Subbaiah, the hon. the Leader of the Opposition in the other House, raised a matter relating to the demolition of unauthorised slums in Banashankari layout, and during the course of the discussion it appears that Sri Subbaiah personally mentioned certain hon. members of that House as being responsible for over-night coming up of these slums in that area, particularly Banashankari layout. The matter was terminated on the floor of the other House on the promise of the Hon'ble Minister for Municipal Administration that the entire matter would be gone into by a Committee of that House consisting of Members belonging to all sections of the House.

The incident that took place this morning appears to have some connection with the discussion that took place on the floor of the Legislative Council. According to the complaint lodged with the Commissioner of Police, Bangalore City, by the brother-in-law of Sri Subbaiah, who happened to be at his residence because Sri Subbaiah was not in the City–he was on official tour and therefore he was not at home–it appears that a group of 150 persons came all the way from Basavanagudi side in a procession and with this procession there was a Police Van and other constabulary following them–our Police personnel were there following the procession. The Police force ought to have known the intention of these persons who are in the procession and ought to have taken sufficiently precautionary and preventive steps from doing any harm to any property or person. Thereafter, it seems they forced their entry into the premises of Sri A. K. Subbaiah in Jayamahal Extension and forcefully broke open the door, pelted stones and damaged some parts of the property. Sri Subbaiah's brother-in-law Sri Devaiah came out and told them that Sri Subbaiah was not at home. It appears also that these 150 people when they were going in the procession they were shouting slogans like "Indira Gandhi, H. C. Srikantaiah, D. Devaraj Urs and Shivanna Zindabad, down with A. K. Subbaiah, etc". The crowd after indulging in the acts of vandalism, criminal acts and illegal acts, entered the compound of Sri H. C. Srikantiah, Minister for Municipal Administration and they were seen squatting on the lawns of his House. These are the facts relating to this incident. In my submission three points arise for consideration of the Government.

(1) Why this violent crowd went through the streets of Bangalore and reached the residence of Sri A. K. Subbaiah. It appears to me that they wanted to wreak vengeance on the attack made by Sri Subbaiah on some member of the other House alleged to be involved in the coming up of slums in Banashankari layout. He appears to be a racketter in the proliferation of slums and a person responsible for making huge sums of money in the bargain. Whether Sri Subbiah had any justification in making an allegation against them on the floor of the Legislative Council and that matter is closed by a reference to the Committee of that House. When the members who were under an attack were not satisfied by the procedure that the other House adopted, they wanted to take vengeance against Sri Subbaiah. That appears to be the criminal intent of that crowd. Of those persons who marched into the processions, there must be some persons who had entered into the House of Subbiah, the Government must be able to investigate and take stern action against them.

(2) Why the police people allowed this procession to pass through the streets and travel a longway to Jayamahal Extension and to the residence of Sri Subbiah; why preventive action was not taken against this crowd and.prevent them physically from going anywhere near that place. Sir, with my little knowledge of education in Bangalore City over a number of years, problems that affected and afflicted the citizens of Bangalore over a period of 15 years, we were arrested overnight merely because we showed an intention of having a dharna or having a march or having a procession or holding a public meeting either under the provisions of Cr.P.C. or under the Police Act. This is my bit er experience over 15 years. Why Police did not have the intelligence report of this march to the residence of Sri Subbiah; why they were allowed to go as if under the protection of the police and allowed them to commit acts of trespass and other illegal acts?

(3) What should happen to the members of the Legislature who take all the courage into their hands and bring to the notice of the government through the forums of the legislature and will the government the lapses that may take place from time to time in the administration. It appears crystal clear that the intention of this crowd, instigated by certain vested political interests with political background, with political influence at the highe t level in the State; have been able to use these 150 people as guinea pigs and thereby wanted to see that the Opposition Leaders cannot function in this State without fear or favour, that appears to be the intention of this crowd. They want to liquidate, they want to annihilate, they want to do away with all the opposition in the State. This is the symptomatic of the disease behind the entire episode that has taken place at the residence of Sri Subbiah. This is an attack not only on Subbiah but it is an attack on the opposition members alone, it is an indeed, if I may say so, an attack on the functioning of the legislators themselves. No member of this House or any other Hous can hereafter take courage to bring forward before the House without any fear or favour any problem which he is justified in bringing to the notice of t is House. That appears to b the intention. Therefore Sir, there is no safety, there is no protection for the members of the opposition particularly. It appears that the police who are working under the very nose of the Chief Minister and in the wake of police actions following the arrest and detension of Mrs. Indira Gandhi and our stand on such incident, the police do not seem to have learnt a lesson. They seem to be under the disease of a paralysis. They do not have the ordinary courtesy to take action under the Cr. P.C. and the Police Act. That appears to be another aspect the matter. We want equal treatment and protection to the

members of this House; indeed to all the members of the society to ven ilate their grievances either on the forum like the legislature or any other legitimate forum that is permissible under the law. That appears to be the main crux of the problem.

† ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಲಕ್ಷ್ಮೀಸಾಗರ್‌ರವರು ಇಂದ ಬೆಳಿಗ್ಗೆ ಪತ್ರಿಕೆಗಳಲ್ಲಿ ಬೆಳಿಗ್ಗೆ ಗಂಟೆ ಸಮಯದಲ್ಲಿ ವಿಧಾನ ಪರಿಷತ್ತಿನ ನಮ್ಮ ಪಕ್ಷದ ಮುಂಖಂಡರಾದ ಶ್ರೀಮಾನ್ ಎ. ಕೆ. ಸುಬ್ಬಯ್ಯನವರ ಘನತೆಯ ಮೇಲೆ ದಾಳಿ ಮಾಡಿದ ಪ್ರಕರಣದ ಬಗ್ಗೆ ಸಾಕಷ್ಟು ತೀವ್ರವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಮೊನ್ನೆ ಎ.ಜಿ.ಪಿ. ಯವರು ಅಧಿಕಾರ ಸ್ವೀಕಾರ ಮಾಡಿದಮೇಲೆ ರಾಜ್ಯದಲ್ಲಿ ಕಾನೂನು ಪರಿಪಾಲನೆ ಸ್ವಲ್ಪಮಟ್ಟಿಗೆ ಸುಧಾರಣೆಯಾಗುತ್ತದೆಂದು ಭಾವಿಸಿದ್ದೆ. ಆದರೆ ಇನ್ನೂ ಕಾರ್ಯರೂಪಕ್ಕೆ ಬರುವುದರಲ್ಲಿ ನಾವು ನಿರೀಕ್ಷಿಸಿದಷ್ಟಾಗಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು ಅದನ್ನು ಕಾದು ನೋಡಬೇಕಾಗುತ್ತದೆ. ಬನಶಂಕರಿ ಲೇಔಟ್‌ನಲ್ಲಿ ರತಕ್ಕ ಕೊಳಚೆ ಪ್ರದೇಶದ ಬಗ್ಗೆ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾದಮೇಲೆ, ಆ ಪತ್ರಿಕಾ ಕಛೇರಿ ಮೇಲೆ ದಾಳಿ ನಡೆಸಲಿಕ್ಕೆ ಪ್ರಯತ್ನ ನಡೆಸಿದ್ದರು. ಅಂದೇ ಯಾರು ಯಾರು ಆ ಕಛೇರಿ ಮೇಲೆ ದಾಳಿ ನಡೆಸಲಿಕ್ಕೆ ಪ್ರಯತ್ನ ಪಟ್ಟರು, ಅವರನ್ನು ಬಂಧಿಸಿದ್ದರೆ ಬಹುಶಃ ಈ ಪ್ರಕರಣ ಸಂಭವಿಸುತ್ತಿರಲಿಲ್ಲ ಎಂದು ನಾನು ಭಾವಿಸುತ್ತೇನೆ.

೫-೫೦ ಪಿ.ಎಂ.

ಈ ಸುದ್ದಿಯನ್ನು ಬಿತ್ತರಿಸಿದ ಮೇಲೆ ಯಾರು ಆ ಪತ್ರಿಕೆಯ ಕಾರ್ಯಾಲಯಕ್ಕೆ ಹೋಗಿ ದಾಳಿ ನಡೆಸಲಿಕ್ಕೆ ಪ್ರಯತ್ನ ಮಾಡಿದರು, ಅದಕ್ಕೆ ಸಂಬಂಧಪಟ್ಟಂತೆ ಯಾವ ರಾಜಕೀಯ ಶಕ್ತಿಗಳು ಅವರ ಹಿಂಬದಿಯಲ್ಲಿದ್ದರು, ಅವರ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಾ? ಆ ಸಂದರ್ಭದಲ್ಲಿ ಕೆಲವರನ್ನು ಅರೆಸ್ಟ್ ಮಾಡಿದ್ದರೆ ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ತಿಳಿಸಬೇಕು. ಒಂದು ವೇಳೆ ತಾವು ಕ್ರಮ ತೆಗೆದು ಕೊಂಡಿದ್ದರೆ ನನ್ನ ಅಭಿಪ್ರಾಯವನ್ನು ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ನನಗೆ ಗೊತ್ತಿರುವ ಹಾಗೆ ಕ್ರಮ ತೆಗೆದುಕೊಂಡಿಲ್ಲ ಎಂದು ನಾನು ಭಾವಿಸುತ್ತೇನೆ. ಬನಶಂಕರಿ ಲೇಔಟಿನ ಪ್ರಕರಣ ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಕನ್ನಡ ಪ್ರಭ ಪತ್ರಿಕೆಯವರು ಮುದ್ರಣ ಮಾಡಿದರು ಅದರ ಮಾರನೆಯ ದಿವಸವೇ ಅಲ್ಲಿಗೆ ಹೋಗಿ ಅಟ್ಯಾಕ್ ಮಾಡಿದ್ದಾರೆ. ಆಗ ಅಲ್ಲಿಗೆ ಪೋಲೀಸಿನವರು ಬಂದು ಅವರನ್ನು ಕಳುಹಿಸಿದ್ದರೆ ಅಂದರೆ ಆ್ಯಕ್ಷನ್ ತೆಗೆದುಕೊಂಡಿರತಕ್ಕದ್ದು ಏನು? ಅವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳದೇ ಇರುವುದರಿಂದ ಪುಂಡಾಟಿಕೆಗೆ ಇಲ್ಲಿ ಸ್ಥಾನಮಾನ ಇದೆ. ರಾಜಕೀಯ ಪ್ರಭಾವ, ರಾಜಕೀಯ ಶಕ್ತಿ, ರಾಜಕೀಯ ಕೈವಾಡ ಇದ್ದರೆ ಏನು ಬೇಕಾದರೂ ಮಾಡಿ ಜಯಿಸಿಕೊಳ್ಳಬಹುದು ಎನ್ನುವ ವಾತಾವರಣ ಇನ್ನೂ ಕೂಡ ಇದೆ ಎನ್ನುವುದು ತಿಳಿದು ಬರುತ್ತದೆ. ಈ ವಿಷಯ ಪರಿಷತ್ತಿನಲ್ಲಿ ಚರ್ಚೆ ಆಯಿತು. ನಾನು ಈ ವಿಷಯದಲ್ಲಿ ಹೇಳುವ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಇರಲಿಲ್ಲ. ಪರಿಷತ್ತಿನಲ್ಲಿ ಈ ವಿಷಯ ಚರ್ಚೆಯಾಗುವಾಗ ಸದನದ ಸದಸ್ಯರ ಬಗ್ಗೆ ಪ್ರಸ್ತಾಪವಾಗಿ ಮಾನ್ಯ ಸುಬ್ಬಯ್ಯನವರಿಗೂ, ಮಾನ್ಯ ಶಿವಣ್ಣನವರಿಗೂ ಮಾತುಕತೆ ನಡೆದಿರಬಹುದು. ನಾನು ಎಲ್ಲಾ ವಿಷಯದ ಬಗ್ಗೆ ಇಲ್ಲಿ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಲಾಂಜ್‌ನಲ್ಲಿ ಏನು ಮಾತುಕತೆಗಳು ನಡೆದವು ಅದನ್ನು ನಾನು ಇಲ್ಲಿ ಪ್ರಸ್ತಾಪ ಮಾಡತಕ್ಕದ್ದು ಅನುಚಿತ ಆ ಸದನದಲ್ಲಿ ವಿಷಯದ ಬಗ್ಗೆ ಪ್ರಿವಿಲೇಜ್ ಮೋಷನ್ ಮೂವ್ ಆಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ನಾನು ಇದನ್ನು ಇಲ್ಲಿಗೆ ಬಿಡುತ್ತೇನೆ. ಲಾಂಜ್‌ನಲ್ಲಿ ಒಬ್ಬ ಸದಸ್ಯರ ಮೇಲೆ ಮತ್ತೊಬ್ಬ ಸದಸ್ಯರು ಆಡಳಿತಕ್ಕೆ ವಿಷಯಗಳ ಬಗ್ಗೆ ಪ್ರಿವಿಲೇಜ್ ಬರುತ್ತದೆಂದು ಹಿಂದೆ ಈ ಸದನದಲ್ಲಿಯೇ ರೂಲಿಂಗ್ ಕೊಟ್ಟಿದ್ದೀರಾ. ಆದುದರಿಂದ ಆ ಸದನದಲ್ಲಿ ಈ ವಿಷಯ ಚರ್ಚೆಯಾಗಬಹುದು. ಲಾಂಜ್‌ನಲ್ಲಿ ಏನು ನಡೆದಿದೆ ಅದರ ಬಗ್ಗೆ ಅವರು ಸಾಕ್ಷಿ ಒದಗಿಸಬಹುದು. ಇದು ಪ್ರಿವಿಲೇಜ್ ಕಮಿಟಿಗೆ ರೆಫರ್ ಆದರೆ ಅಲ್ಲಿ ನಡೆಯುತ್ತದೆ ಆದುದರಿಂದ ನಾನು ಈ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ.

ಇವೊತ್ತು ಬೆಳಿಗ್ಗೆ ನಾನು ನಿಮ್ಮ ಮನೆಯ ಮುಂಭಾಗದಲ್ಲಿ ಬರುತ್ತಿದ್ದೆ ಜನರೆಲ್ಲಾ ನಿಮ್ಮ ಮನೆಯ ಮುಂದೆ ಪೆರವಣಿಗೆ ತೆಗೆದುಕೊಂಡು ಬರುತ್ತಿದ್ದರು, ನಾನು ಅಲ್ಲೇ ಬರುತ್ತಾ ಇದ್ದಾಗ ಸುಮಾರು ೧೨

ಘಂಟೆ ಅಥವಾ ಹನ್ನೆರಡೂವರೆ ಗಂಟೆ ಇರಬಹುದೆಂದು ನಾನು ಭಾವಿಸುತ್ತೇನೆ. ಏಕೆಂದರೆ ನಾನು ಆಗ ಟೈಮ್ ನೋಡಲಿಲ್ಲ. ಅವರು ತಮ್ಮ ಬಗ್ಗೆ ಜಯಕಾರ ಹಾಕುತ್ತಿದ್ದರು, ಅವರು ಜಯಕಾರ ಹಾಕುವ ಬಗ್ಗೆ ನಾನು ಆಸಹ್ಯ ಪಡುವಂತಾದ್ದು ಇಲ್ಲ ಅವರ ಸಮಸ್ಯೆಗಳನ್ನು ಬಗೆಹರಿಸುವಂತಾದ್ದು ನಿಮ್ಮ ಮೇಲೆ ಇದೆ ಅವರ ಆಶೋತ್ತರಗಳಿಂದ ನಿಮ್ಮ ಮೇಲೆ ಒಳ್ಳೆಯ ಮಾತುಗಳನ್ನು ಆಡಿದರೆ ಅದಕ್ಕೆ ನಾನು ಏನು ಹೇಳುವುದಿಲ್ಲ. ಬೆಂಗಳೂರು ನಗರದ ಕೊಳಚೆ ಪ್ರದೇಶದ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಲಿಕ್ಕೆ ಒಂದು ಕಾಲವನ್ನು ಗೊತ್ತುಮಾಡಿದ್ದೇವೆ ಆದುದರಿಂದ ಅದರ ಬಗ್ಗೆ ನಾನು ಈಗ ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಬಹುಶಃ ೧೭ನೇ ತಾರೀಖು ನಮ್ಮ ಈ ಸದನದಲ್ಲಿ ಈ ವಿಷಯವನ್ನು ಚರ್ಚೆ ಮಾಡಲಿಕ್ಕೆ ಎರಡೂವರೆ ಗಂಟೆ ಕಾಲವನ್ನು ಒದಗಿಸಿಕೊಟ್ಟಿರುವುದರಿಂದ ಆವೊತ್ತು ಪ್ರಸ್ತಾಪ ಮಾಡುತ್ತೇನೆ. ವಿಧಾನ ಪರಿಷತ್ತಿನ ಅಥವಾ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರು ಇರಬಹುದು. ಅಥವಾ ಈ ಸದನದ ಯಾರೇ ಸದಸ್ಯರು ಇರಬಹುದು, ಈ ತರಹ ಅಕ್ರಮ ವ್ಯವಹಾರಗಳ ಪ್ರಸಂಗವನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಪ್ರಯತ್ನ ಮಾಡಿದರೆ, ಯಾರು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಾರೆ ಅವರ ಮೇಲೆ ಆವೊತ್ತು ಸೇಡಿನ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ ಬಹುಶಃ ಈ ಸದನದಲ್ಲಿ ಯಾರೂ ನಿರ್ಭಯವಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲ. ನನಗೂ ಹಾಗೂ ಮಂತ್ರಿಗಳಿಗೂ ಆರೇಳು ವರ್ಷಗಳಲ್ಲಿ ಅನೇಕ ಚಿಕವಾಡಿಗಳು ಆಗಿರಬಹುದು, ಇದು ಬಹಳ ಕೆಳದರ್ಜೆಯ ರಾಜಕಾರಣ. ನೀವು ಇದಕ್ಕೆ ಆಶ್ರಯ ಕೊಟ್ಟಿದ್ದೀರೆಂದು ಹೇಳುವುದಿಲ್ಲ. ಇದಕ್ಕೆ ಯಾರು ಈ ಪ್ರಕರಣದ ಹಿನ್ನೆಲೆಯಲ್ಲಿ ಇದ್ದಾರೆ. ಇದು ಚರ್ಚೆಯಾದ ಸಾಯಂಕಾಲವೇ ಲೌಂಜ್‌ನಲ್ಲಿ ನಡೆದಂತಹ ಆಧಾರದ ಮೇಲೆ ಸುಬ್ಬಯ್ಯ ಶೆಟ್ಟರ ಮೇಲೆ ಹಲ್ಲೆ ಮಾಡುತ್ತಾರೆ ಅನ್ನುವ ವರದಿ ಬಂತು. ಆಗ ನಾನು ಒಬ್ಬ ವಿರೋಧ ಪಕ್ಷದ ನಾಯಕರ ಮೇಲೆ ಹಲ್ಲೆ ಮಾಡುವುದು ಅಷ್ಟು ಸುಲಭವಾದ ಕೆಲಸ ಅಲ್ಲ ಎಂದು ನಾನು ಆವೊತ್ತೇ ಹೇಳಿದ್ದೇನೆ. ಆವೊತ್ತು ಯಾರು ಮಾಡಿಸಿದ್ದಾರೆ, ಮಾಡಿಸಲಿಕ್ಕೆ ಪ್ರಯತ್ನ ಮಾಡಿದ್ದಾರೆ, ಅವರ ಹಿಂದೆ ಯಾವ ರಾಜಕೀಯ ಶಕ್ತಿ ಇದೆ ಅದನ್ನು ಪತ್ತೆ ಹಚ್ಚಬೇಕು. ನೀವು ಪತ್ತೆ ಹಚ್ಚುತಕ್ಕಂತಹ ಕ್ರಮವನ್ನು ತೆಗೆದುಕೊಳ್ಳುತ್ತೀರೆಂದು ನಾನು ಆಶಿಸುತ್ತೇನೆ. ಈ ಒಂದು ಮೆರವಣಿಗೆ ಬರತಕ್ಕ ಕಾಲದಲ್ಲಿ ಅಲ್ಲಿ ಯಾವ ಪೋಲೀಸ್ ಅಧಿಕಾರಿಗಳು ಇದ್ದರು ಅವರು ಏತಕ್ಕೆ ಇವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ? Why they were silent spectators ; and why they have not taken action.? That is very important issue. Why they have not arrested? ಸುಬ್ಬಯ್ಯನವರ ಮನೆಯ ಒಳಗಡೆ ನುಗ್ಗಿ ದಾಳಿ ನಡೆಸುವಾಗ ಅಲ್ಲಿದ್ದಂತಹ ಏಳೆಂಟು ಜನ ಪೋಲೀಸ್ ಅಧಿಕಾರಿಗಳು, ನಿಮ್ಮ ವ್ಯಾನು ಎಲ್ಲಾ ಎಲ್ಲಿಗೆ ಹೋಯಿತು. ಇದು ಸಬ್ಸಿಕ್ವೆಂಟ್ ಆಗಿ ಆಗಿದೆ. ತಾವು ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಆಪ್ರೊಸಿಪನ್ ಲೀಡರ್ ಅವರ ಮನೆಯ ಮೇಲೆ ದಾಳಿ ನಡೆಸುತ್ತಿರುವ ಕಾಲದಲ್ಲಿ ಕ್ರಮ ತೆಗೆದುಕೊಳ್ಳದೇ ಇರಲು are they so incompetent? ಇದು ಕರ್ತವ್ಯ ಲೋಪವಾಗಿದೆ ಎಂದು ಭಾವಿಸುತ್ತೇನೆ. ತಾವು ದಯಮಾಡಿ ಇದರ ಬಗ್ಗೆ ವಿಚಾರ ಮಾಡಿಸಿ ಆಮೇಲೆ ನಿಮ್ಮ ಸರ್ಕಲ್ ಇನ್ಸ್‌ಪೆಕ್ಟರ್ ಹೋಗಿದ್ದಾರೆ ಆರು ಜನರನ್ನು ಬಂಧನ ಮಾಡಿದ್ದಾರೆ, ಅದನ್ನು ನಾನೇ ಹೇಳುತ್ತೇನೆ. ಪೋಲೀಸ್‌ನವರು ಸ್ಪಾಟ್‌ನಲ್ಲಿದ್ದಾಗ ಏತಕ್ಕೆ ಸುಮ್ಮನೆ ವೀಕ್ಷಕರಾಗಿದ್ದರು ಏತಕ್ಕೆ ಮೂಕ ಪ್ರಾಣಿಗಳಂತೆ ವರ್ತಿಸಿದ್ದಾರೆ. ಅವರ ಬಗ್ಗೆ ತಾವು ದಯಮಾಡಿ ತನಿಖೆ ನಡೆಸಿ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕು. ತಾವು ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳುತ್ತೀರೆಂದು ನಾನು ಆಶಿಸುತ್ತೇನೆ. ರಾಜಕೀಯದಲ್ಲಿ ನಮಗೆ ಎಷ್ಟೇ ತಿಕ್ಕಾಟ ಬರಬಹುದು, ವಿಷಯಗಳ ಸಂಘರ್ಷಣೆಯಾಗಬಹುದು ಆದರೆ ಇಷ್ಟು ಮಾತ್ರ ಹೇಳುತ್ತೇನೆ. ಸದನದ ಯಾವ ಸದಸ್ಯರೇ ಆಗಲಿ ತಮ್ಮ ಕರ್ತವ್ಯ ನಿರ್ವಹಣೆಗೆ ಯಾವುದೇ ಸಂದರ್ಭದಲ್ಲಿ ಅಡ್ಡ ಬರಬಾರದು, ಆತಂಕವಾಗಬಾರದು ನಿರ್ಭಯ ವಾತಾವರಣದಲ್ಲಿ ಕೆಲಸ ಮಾಡಬೇಕು. ಇದನ್ನು ನೀವು ಒಪ್ಪುತ್ತೀರಾ, ನಾವೆಲ್ಲಾ ಒಪ್ಪುತ್ತೇವೆ. ಅದಕ್ಕೆ ತಾವು ಅನುವು ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟನ್ನು ಹೇಳುವಾಗ ಆವೊತ್ತು ನಿಮ್ಮ ಕರ್ತವ್ಯ ಏನು ಇದೆ ಅದರ ಮೇಲೆ ಅವಲಂಬನೆಯಾಗುತ್ತದೆ. ಅಲ್ಲಿ ಯಾವ ಅಧಿಕಾರಿಗಳು ಇದ್ದರು ಅಲ್ಲಿ ನಾಲ್ಕು ಜನರು ಇರಲಿ, ಆರು ಜನರು ಇರಲಿ ಅವರನ್ನು ಸಸ್ಪೆಂಡ್ ಮಾಡಬೇಕಾಗುತ್ತದೆ. ಏಕೆಂದರೆ ಅವರು ಕರ್ತವ್ಯ ಲೋಪ ಮಾಡಿದ್ದಾರೆ. ನಾಲ್ಕು ಜನರು ಮನೆಯೊಳಗೆ ನುಗ್ಗಿದಾಗ ಅವರನ್ನು ಓಡಿದುಕೊಳ್ಳಲಿಕ್ಕೆ ಆಗಲಿಲ್ಲವೇನು? ಅಲ್ಲಿ ಆಪರಿಗೆ ಏನಾಗಿದೆ ಅಂದರೆ ಇವರನ್ನು ಮುಟ್ಟಿದರೆ ಹೇಗೆ ಆನ್ನುವ ಮಾನಸಿಕ ದೌರ್ಬಲ್ಯ ಬಂದಿದೆ. ಇವರನ್ನು ನಾವು ಟಚ್ ಮಾಡಿದರೆ ನಮ್ಮ ಗತಿ ಏನು ಎನ್ನುವ ಮಾನಸಿಕ ಭಾವನೆ ಇನ್ನೂ ಅವರಲ್ಲಿ ಉಳಿದಿದೆ. ಅದನ್ನು ತಾವು ತೊಳೆಯಬೇಕು ಆ ವಾತಾವರಣವನ್ನು ನಿರ್ಮೂಲನ ಮಾಡಬೇಕು. ಇಲ್ಲದೇ ಇದ್ದರೆ

ನಮ್ಮ ಆಡಳಿತದ ವ್ಯವಸ್ಥೆ ನಿರೀಕ್ಷಿಸಿದ ಮಟ್ಟದಲ್ಲಿ ಬರಲಿಕ್ಕೆ ಸಾಧ್ಯವಿಲ್ಲ. ಆದುದರಿಂದ ತಾವು ದಯಮಾಡಿ ಅವರೆಲ್ಲರತಕ್ಕ ಮಾನಸಿಕ ದೌರ್ಬಲ್ಯವನ್ನು ನಿವಾರಣೆ ಮಾಡಲಿಕ್ಕೆ ಕೆಲಸ ಮಾಡಿಸುತ್ತೀರೆಂದು ನಾನು ಆಶಿಸುತ್ತೇನೆ. ಯಾರು ಆ ಕೆಲಸಕ್ಕೆ ಕೈ ಹಾಕಿದ್ದಾರೆ ಅದನ್ನು ನಾನು ಉಗ್ರವಾಗಿ ಖಂಡಿಸಿ ಮಾಡುತ್ತೇನೆ. ಈ ತರಹ ಕೆಳಮಟ್ಟದ ರಾಜಕೀಯ ಉತ್ತರ ಹಿಂದೂಸ್ತಾನಕ್ಕೆ ಇಲ್ಲಿಯವರೆಗೆ ವಿಸಲಾಗಿತ್ತು. ಕರ್ನಾಟಕದಲ್ಲಿ ಯಾವ ಕಾಲದಲ್ಲೂ ಈ ತರಹ ಘಟನೆಗಳು ನಡೆದಿಲ್ಲ. ಇವೊತ್ತು ಇಲ್ಲಿ ಅದಕ್ಕೆ ಅವಕಾಶ ಕೊಡಬಾರದು. ಅದಕ್ಕೆ ಅವಕಾಶವನ್ನು ಕೊಡದಂತೆ ನಡೆದುಕೊಳ್ಳುತ್ತಾರೆಂದು ಆಶಿಸುತ್ತೇನೆ. ಮತ್ತು ಮಾನ್ಯ ಮುಖ್ಯ ಮಂತ್ರಿಯವರು ಉತ್ತರವನ್ನು ಕೊಟ್ಟನಂತರ ವಿವರಣೆ ಕೇಳಿ ಎಂದರೆ ನಾನು ಕೇಳುತ್ತೇನೆ.

ಅಧ್ಯಕ್ಷರು.—ಈಗಾಗಲೇ ಇದರ ಬಗ್ಗೆ ಮಾನ್ಯ ಸದಸ್ಯರು ಸಾಕಷ್ಟು ವಿಚಾರ ಮಾತನಾಡಿದ್ದಾರೆ. ಇನ್ನೂ ಮಾತನಾಡುವಂಥಾದ್ದು ಏನೂ ಇಲ್ಲವೆಂದು ನನ್ನ ಭಾವನೆ.

†ಶ್ರಿ ಜೆ. ಹೆಚ್. ಪಟೇಲ್ (ಜೆಸ್ಸಗಿರಿ).—ಮಾನ್ಯ ಅಧ್ಯಕ್ಷರೇ, ನಾನು ಕೇವಲ ಒಂದು ಮಾತನು. ಮಾತ್ರ ಹೇಳಬಯಸುತ್ತೇನೆ. ಇಂಥ ಒಂದು ಆಪಿತಕರ ಘಟನೆ ನಡೆಯಬಾರದಾಗಿತ್ತು. ನಡೆದು ಹೋಗಿದೆ ಇದು ಬಹಳ ಮಹತ್ವವುಳ್ಳ ಸಮ್ಮ ರಾಜ್ಯದಲ್ಲಿರತಕ್ಕ ಪೋಲೀಸ್ ವ್ಯವಸ್ಥೆಯನ್ನೂ ಮತ್ತು ರಾಜಕೀಯವಾಗಿ ಪರಸ್ಪರರು ಯಾವ ರೀತಿ ನಡೆದುಕೊಳ್ಳುತ್ತಾರೆಂಬುದನ್ನು ವಿಶ್ಲೇಷಿಸುತ್ತದೆ. ಇದರ ಹಿಂದೆ ಏನು ಇದೆ ಎಂಬುದನ್ನು ಹೇಳುವುದಾದರೆ, ನಾವು ಈ ಸದನದಲ್ಲಿ ನಿರ್ಧಯವಾಗಿ ವಿಚಾರವನ್ನು ಹೇಳತಕ್ಕ ಅವಕಾಶವಿಲ್ಲದಿದ್ದರೆ, ರಸ್ತೆಯಲ್ಲಿ ಚಾಕು, ಚೂರಿ, ಸೈಕಲ್ ಚೈನು, ಇಂಥವುಗಳಿಂದ ವಿಷಯಗಳು ತೀರ್ಮಾನವಾಗುವುದಾದರೆ ಈ ಸದನ ಇರುವುದು ಖಂಡಿತ ವ್ಯರ್ಥವೆಂದು ಹೇಳಬೇಕಾಗುತ್ತದೆ. ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ, ವಿರೋಧ ಪಕ್ಷದ ನಾಯಕರ ಮನೆಯ ಮೇಲೆ ಹಾಡುಹಗಲಿನಲ್ಲೇ ಪೋಲೀಸರ ಕಣ್ಣೆದುರಿನಲ್ಲೇ ಇಂಥ ಕೃತ್ಯಗಳು ನಡೆಯುವುದಾದರೆ, ಇನ್ನು ಹಳ್ಳಿಗಳಲ್ಲಿ ಯಾವ ರೀತಿ ದೌರ್ಜನ್ಯಗಳು ನಡೆಯುತ್ತವೆ ಎಂಬುದನ್ನು ತಾವೇ ಯೋಚನೆ ಮಾಡಬೇಕು. ಈ ಘಟನೆಗೆ ಜವಾಬ್ದಾರರು ಯಾರು ಎಂಬುದನ್ನು ಕಂಡುಹಿಡಿದು ಅವರಿಗೆ ಶಿಕ್ಷೆ ಮಾಡುವುದು ಆಷ್ಟೇ ಅಲ್ಲ ಇನ್ನು ಮುಂದೆ ಪರಸ್ಪರ ಹಿಂಸೆಗಳಿಂದಲೇ ಪಾಠಗಳನ್ನು ಕಲಿಸಬೇಕಾಗುತ್ತದೆ ಎನ್ನತಕ್ಕ ಭಾವನೆಯನ್ನು ಕರ್ನಾಟಕ ರಾಜ್ಯದಲ್ಲಿ ಆಳುವ ಪಕ್ಷದವರು ನಿಲ್ಲಿಸದೇ ಹೋದಲ್ಲಿ ದೇಶದ ಪರಿಸ್ಥಿತಿ ಕೈ ಮೀರಿ ಹೋಗುತ್ತದೆ. ಜನರು ತಮ್ಮ ಮಾನ ಹಾಗೂ ಪ್ರಾಣಗಳನ್ನು ಉಳಿಸಿಕೊಳ್ಳುವ ಸಲುವಾಗಿ ಯಾವ ಮಟ್ಟಕ್ಕೆ ಬೇಕಾದರೂ ಇಳಿಯಬೇಕಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯವನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳದೆ ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು ತನಿಖೆ ನಡೆಸಬೇಕೆಂದು ಹೇಳಬಯಸುತ್ತೇನೆ.

## Statement by the Chief Minister

*re* : **attack on the recidence of Sri A. K. Subbaiah M. L. C Slum dwellers.**

SRI D. DEVARAJ URS (Chief Minister).—Sir, according to the reports I have received, at about 10 a.m. this morning about 100 Banashankari slum dwellers included about 50 ladies took out a procession from Banashankari shouting slogans against Sri A. K. Subbaiah Leader of the Opposition in the Legislative Council, for making allegations in the Council against Shri Shivanna, a member of the Council, that Shri Shivanna collected money from them promising allotment of sites and thereby encouraged them to put up huts at Sarabandepalya. One CAR van with Armed Reserve Constables and a mobile van with a S.I. and a few constables followed the procession